ಐಸಕುಂಞಿ, ತನ್ನ ಕೊನೆಯ ದಿನಗಳಲ್ಲಿ ಬಾಯಿಯ ಕ್ಯಾನ್ಸರ್‌ನಿಂದ ನರಳಿ ದಿನವೆಣಿಸುತ್ತಿದ್ದಾಗ, ನಾನವಳನ್ನು ಕಾಣ ಹೋಗಿದ್ದೆ. ರಜಾಕ್, ನಫೀಸಾ, ಸೆಫಿಯಾ, ಬೀಪಾತು ಎಂದು ಅವಳ ಐವರು ಮಕ್ಕಳೂ ತಮ್ಮ ಮಕ್ಕಳೊಡನೆ ಅಲ್ಲಿದ್ದರು. ಹಿತ್ತಿಲು ಭಾಗಶಃ ಮಾರಾಟವಾಗಿ, ಅಲ್ಲಿ ಬೇರೆರಡು ಮನೆಗಳು ಎದ್ದಿದ್ದುವು. ಬಾವಿ, ಪಂಪ್ ಇಡಿಸಿಕೊಂಡು, ಕಲುಷಿತವಾದಂತೆ ತೋರುತ್ತಿತ್ತು. ನಫೀಸಾ ಕುಡಿಯಲು ತಂದಿತ್ತ ನೀರೂ ಮೊದಲಿನಂತೆ ಸಿಹಿಯಿರಲಿಲ್ಲ.

ವರ್ಷಂಪ್ರತಿ ಏಪ್ರಿಲ್ 22–23ಕ್ಕೆ ಉಚ್ಚಿಲ ಕೋಟೆ ವಿಷ್ಣುಮೂರ್ತಿ ಜಾತ್ರೆ. ಮನೆಯ ಪಶ್ಚಿಮಕ್ಕೆ ರೈಲು ಹಳಿಯಾಚೆ, ಸಮುದ್ರತಡಿಯಲ್ಲಿ ಎತ್ತರದ ಬೆಟ್ಟದ ಮೇಲಿನ ದೇವಳದ ಬಿಸಿಲು ಮಹಡಿಯು, ಇತ್ತ ಕೆಳಗಿದ್ದ ನಮ್ಮ ಹಿತ್ತಿಲಿಂದ ನೋಡಿದರೆ ಕಾಣುತ್ತಿತ್ತು. ಹಾಗೆಯೇ, ದೇವಳದ ಆ ಬಿಸಿಲು ಮಹಡಿಯೇರಿ, ಪೂರ್ವಕ್ಕೆ ದಿಟ್ಟಿಸಿದರೆ, ನಮ್ಮ ಅರಸುವ ಕಣ್ಣುಗಳಿಗೆ ಆ ಅಗಾಧ ಹಸಿರಿನ ನಡುವೆ



ಕಾಣುತ್ತಿದ್ದುದು, ನಮ್ಮಜ್ಜಿ ಮನೆಯ ಗೋಡೆಯೊಂದೇ. ಪಶ್ಚಿಮಕ್ಕೆ ಸಮುದ್ರ ನೀಲಿಯ ವೈಶಾಲ್ಯ ದೊಡ್ಡದೋ, ಈ ಪೂರ್ವದ ಹಸಿರ ವೈಶಾಲ್ಯ ದೊಡ್ಡದೋ ಎಂದು ಕೌತುಕವೆನಿಸುತ್ತಿತ್ತು.

ಜಾತ್ರೆಯ ಸಂದರ್ಭದಲ್ಲಿ 'ಅಮರಾ, ಮಧುರಾ, ಪ್ರೇಮಾ ನೀ ಬಾ ಬೇಗ ಚಂದ ಮಾಮಾ', 'ಏ ಮೊಹಬ್ಬತ್ ಜಿಂದಾಬಾದ್...' ಮುಂತಾದ ಅಂದಿನ ಚಿತ್ರಗೀತೆಗಳು ಅಲೆಯಲೆಯಾಗಿ ಅಲ್ಲಿಂದ ಹರಿದು ಬರುತ್ತಿದ್ದುವು. ರಾತ್ರಿ ತೂಕಡಿಸುತ್ತಾ ದೇವರ ಬಲಿ ಪೂಜೆ ನೋಡಿ ಹಿಂದಿರುಗುವಾಗ, ಒಂದೆರಡು ಹನಿಯಾದರೂ ಮಳೆ ಸುರಿಯದೆ ಇಲ್ಲ. ಬಲಿಪೂಜೆಯ ಮರುದಿನ ಬಂಟ, ಜುಮಾದಿಯ ನೇಮಕ್ಕೆ ಹಾಗೂ ಸಂತೆ ತಿರುಗಲು ಹೋಗುವಾಗ ದೊಡ್ಡಪ್ಪ ನಮ್ಮೆಲ್ಲರ ಕೈಗೂ ನಾಲ್ಕಾಣೆಯಂತೆ ಕೊಡುತ್ತಿದ್ದರು. ಸಂತೆಯಲ್ಲಿ ಬೊಂಬೆ, ಮೆಣಸುಮಿಠಾಯಿ, ಸುಕುನುಂಡೆ, ಬಳೆ, ಮಲ್ಲಿಗೆ ಹೂ ಸಂಭ್ರಮ! ಜುಮಾದಿಯ ನೇಮದಲ್ಲಿ ಮಾತ್ರ, ಬಂಬೂತನ ಮುಖ ನನ್ನ ದೃಷ್ಟಿಗೆ, ಐಸಕುಂಞಿಯ ದೊಡ್ಡಮ್ಮ ಮರಿಯತರ ಮುಖದಂತೆಯೇ ಕಂಡು ಭಯ ಹುಟ್ಟಿಸುತ್ತಿತ್ತು. ಅವೇ ಉಂಗುರುಂಗುರ ಕಿವಿಯೋಲೆಗಳ ದೊಡ್ಡ ಜೋಲುವ ಕಿವಿಗಳು; ಕಾಲ ದಪ್ಪ ಅಂದುಗೆಗಳು, ಭಾರದ ಒಡ್ಯಾಣ! ಅದೇ ಐಸ ಕುಂಞ ಎಂದರೆ ಅಷ್ಟೇ ಪ್ರೀತಿ, ಸಲುಗೆ. ಅವಳ ಬಿಳಿ,ಗುಲಾಬಿ ಮೈ ಬಣ್ಣ, ಸೌಮ್ಯ ನೀಲ ಕಂಗಳು, ತಲೆಯ ಹಸಿರು ವಸ್ತ್ರದಿಂದಿಣುಕುವ ಅವಳ ತೆಳು ಅಲೆಗೂದಲು, ಹಕ್ಕಿ ತುಪ್ಪಳದಂತಹ ಬೆಳ್ಳನೆ ಮಲ್ ಬಟ್ಟೆಯ, ಕುಚ್ಚು ತೂಗುವ ಸಡಿಲ ಕುಪ್ಪಾಯ ಮತ್ತದರ ಕಸೂತಿಯ ಚಿತ್ತಾರದ ಸೊಗಸು! ಒಳಗಣ ಸೌಂದರ್ಯನಿಧಿಯನ್ನು ಮಸುಕಾಗಿಯಾದರೂ ತೋರುತ್ತಿದ್ದ ಕುಪ್ಪಾಯ!

ಗುಡ್ಡೆಮನೆಯ ನಮ್ಮಜ್ಜಿ, ಮೊಮ್ಮಕ್ಕಳಿಗೆ ತಿನಿಸಿದಷ್ಟೂ ತಣಿಯದ ಜೀವ. ಸೋದರತ್ತೆ ಶಾರದತ್ತೆ, ಸದಾ ಹಾಡು ಗುನುಗುತ್ತಾ ಒಳ ಹೊರಗೆ ಅಡ್ಡಾಡುತ್ತಾ ಮನೆಕೆಲಸದಲ್ಲಿ ಮಗ್ನರಾಗಿರುತ್ತಿದ್ದ ಪ್ರಿಯಜೀವ. ಗುಡಿಸುವಾಗ ಸಿಕ್ಕಿದ ಚೂರು ಕಾಗದವನ್ನಾದರೂ ಓದಿಯೇ ತೀರುವ ಶಾರದತ್ತೆಯ ಕೆಲಸ ಮುಗಿಯಿತೆಂದರೆ, ಆ ಕೈಗಳಲ್ಲಿ ಪುಸ್ತಕ ಪ್ರತ್ಯಕ್ಷ. ದೊಡ್ಡಮ್ಮ ಎಳೆ ಶಿಶುವಿನ ಬಟ್ಟೆಗಳನ್ನು ಒಗೆಯಲು ಹೊಳೆಗೆ ಹೋದಾಗ ನಾವು ಮಕ್ಕಳೂ ಅವರ ಹಿಂದೆ ಹೋಗಿ ಹೊಳೆ ನೀರಲ್ಲಿ ಮನಸೋ ಇಚ್ಛೆ ಆಡುತ್ತಿದ್ದೆವು.

ರೈಲು ಸಂಕದ ವರೆಗೆ ಮಾತ್ರ ನಮ್ಮ ನೀರಾಟ; ಈಜಾಟ. ಅಲ್ಲಿಂದ ಮುಂದೆ ಹೊಳೆ ಆಳವಿತ್ತಷ್ಟೇ ಅಲ್ಲ, ದೊಡ್ಡಪ್ಪನ ಮಗ ತುಂಟ ಸುರೇಶಣ್ಣನ ಹಲವು ಭೂತದ ಕಥೆಗಳು ನಮ್ಮ ಸಾಹಸಕ್ಕೆ ಅಡ್ಡಿ ಬರುತ್ತಿದ್ದುವು. ರೈಲು ಸಂಕದ ಅಡ್ಡ ಪಟ್ಟಿಗಳಿಂದ ಪುಟ್ಟ ಮಗುವೊಂದು ಕಾಲುಜಾರಿ ಬಿದ್ದು ಕೆಳಗಿನ ಬಂಡೆಕಲ್ಲಿನಲ್ಲಿ ತಲೆಯೊಡೆದು ಸತ್ತಿದ್ದು, ಸಂಕದ ಮೇಲೆ ನಡೆವವರನ್ನು ಭೂತವಾಗಿ ಕೆಳಗೆಳೆಯುತ್ತದೆ ಎಂಬ ಸುರೇಶಣ್ಣನ ಕಥೆ, ಅಂಥ ಅವರ ಕಟ್ಟುಕಥೆಗಳ ಭಂಡಾರದಲ್ಲೊಂದು! ಗದ್ದೆಹುಣಿಯಲ್ಲಿ ಯಾರಾದರೂ ಸೂಟೆ ಹೊತ್ತಿಸಿಕೊಂಡು ಹೋಗುತ್ತಿದ್ದರೆ, 'ಅಕೋ, ಕೊಳ್ಳಿ ದೆವ್ವ ಹೋಗುತ್ತಿದೆ' ಎಂದೂ, ರಾತ್ರಿ ದೀಪವಾರಿ ನಾವೆಲ್ಲ ಮಲಗಿರುವಾಗ, ಬಂಡಿರಸ್ತೆಯಲ್ಲಿ ಎತ್ತಿನ ಬಂಡಿಯ ಕೊರಳಗಂಟೆ ಕೇಳಿಸಿದರೆ, 'ಅದೋ, ಭಂಡಾರ ಹೋಗುತ್ತಿದೆ' ಎಂದೂ, ಮನೆಯ ಹಿಂಬದಿಗೆ ಹೋಗಿ 'ಉಕ್ಕೆವೂ..' ಎಂದು ನರಿಯಂತೆ ಊಳಿಟ್ಟು ನಮ್ಮನ್ನು ಬೆದರಿಸಲೆತ್ನಿಸುವ ಸುರೇಶಣ್ಣ. ಕೋಟೆ ಬೆಟ್ಟದ ಮೈಯ ಬಂಡೆಯಲ್ಲಿದ್ದ ಟಿಪ್ಪು ಸುಲ್ತಾನನ ಸುರಂಗದೆದುರು ನಿಂತು, 'ಮೈಸೂರಿಗೆ ಯಾರೆಂದು ಕೇಳಿದ್ದೀರಿ?' ಎಂದು ಬಯಲಾಟದ ಧಿಗಿಣ ಕುಣಿಯುತ್ತಿದ್ದ ಸುರೇಶಣ್ಣ.

ನಮ್ಮ ಗದ್ದೆಯನ್ನು ಗೇಣಿಗೆ ಮಾಡಿಕೊಂಡಿದ್ದ ಗಂಗಯ್ಯಣ್ಣನೇ ನಮ್ಮಲ್ಲಿ ಕಾಯಿ, ಸೀಯಾಳ ಕೀಳಲು ಬರುತ್ತಿದ್ದುದು. ಮೂರು ದೊಡ್ಡ ಲೋಟ ಸಿಹಿ ಸಿಹಿ ನೀರು ಹಿಡಿವಂತಹ ಕಾಯ್ಗಳು. ಮತ್ತೆ ಬನ್ನಂಗಾಯ್ಗಳು. ಬನ್ನಂಗಾಯಿ ತಿರುಳು ಸೀಳಿ ಎಬ್ಬಿಸಿ, ಓಲೆ ಬೆಲ್ಲದೊಂದಿಗೆ ಬೆಲ್ಯಮ್ಮ ನಮಗೆಲ್ಲ ತಿನಿಸಿದ ಮೇಲೆ, ಊಟಕ್ಕೆ ಹೊಟ್ಟೆಯಲ್ಲಿ ಸ್ಥಳವಾಗ ಬೇಕಾದರೆ ಪುನಃ ನಮ್ಮ ದಂಡಯಾತ್ರೆ ಸುತ್ತಣ ಹಿತ್ತಿಲು, ಗದ್ದೆಗಳಲ್ಲೆಲ್ಲ ಸಾಗಬೇಕು. ಮಧ್ಯಾಹ್ನ ಹನ್ನೆರಡು ಗಂಟೆಗೆ ಪಕ್ಕದ ಮಸೀದಿಯ ಬಾಂಗ್ ಹೊರಟಿತೆಂದರೆ 'ಬಾಂಜ ಹೋಯ್ತು; ಮಕ್ಕಳಿಗೆ ಊಟ ಬಡಿಸಿ', ಎಂದು ಬೆಲ್ಯಮ್ಮನ ಕರೆಯೂ ಹೊರಡುತ್ತಿತ್ತು.

ನನ್ನೂರ ಪರಮಪ್ರಿಯ ರುದ್ರ ರಮ್ಯ ಸಮುದ್ರ ತೀರದ ಬದಲಾದ ನೋಟವೂ ನನ್ನ ಮುಂದೆ ತೆರೆದು ಕೊಂಡಿದೆ. ವಿಶಾಲ ಮರಳ ತೀರವಿದ್ದ, ಹೆದ್ದೆರೆಗಳು ಅಪ್ಪಳಿಸುತ್ತಿದ್ದ, ಚಿಪ್ಪುಗಳನ್ನಾಯುತ್ತಾ ಮರಿಏಡಿಗಳ ಹಿಂದೆ ಓಡುವ ಚೆಣ್ಣರು ಮನಸೋಕ್ತ ಆಡಿ ವಿಹರಿಸುತ್ತಿದ್ದ ತೀರವೀಗ ಬಂಡೆಗಲ್ಲುಗಳ ತಡೆಗೋಡೆಯನ್ನು ಹೊತ್ತು ಸಮುದ್ರವನ್ನೇ ಮರೆಮಾಡಿ ನಿಂತಿದೆ. ಮರಳ ಹಾಸು, ಹಸಿರು ಕುರುಚಲು ಬಳ್ಳಿಗಳು, ಗಾಳಿ ಮರಗಳು, ವೃತ್ತಾಕಾರದ ತೋಡುಬಾವಿಗಳು ಎಲ್ಲವೂ ಅದೆಂದೋ ಮಾಯವಾಗಿವೆ.